ಶ್ರೀ ಹೆಚ್. ಡಿ. ಬಸವರಾಜು : ನಾನು ಅದನ್ನೇ ಕೇಳುತ್ತಿರುವುದು. ವಿರಾಜಪೇಟೆ ತಾಲ್ಲೂಕಿನ ಮೊನ್ನೆಂಪೇಟೆಯಲ್ಲಿ ಎರಡು ವರ್ಷಗಳ ಹಿಂದೆ ಒಂದು ಕಟ್ಟಡವನ್ನು ಕಟ್ಟಿದ್ದಾರೆ; ಅದರ ಬಗ್ಗೆ ನಾನು ಕೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : ವಿರಾಜಪೇಟೆಯಲ್ಲಿ ಐಟಿಐ ಬಿಲ್ಡಿಂಗ್ ಕಟ್ಟಿದ್ದಾರೆ, ಅದರ ಕೆಲಸ ಪ್ರಾರಂಭ ಮಾಡಿಲ್ಲವೆಂದು ಹೇಳುತ್ತಾರೆ. ಅದರ ಬಗ್ಗೆ ನಾನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಉಪಾಧ್ಯಕ್ಷರು : ಶ್ರೀ ಕುಮಾರ್ ಬಂಗಾರಪ್ಪನವರ ಪ್ರಶ್ನೆ : 1844 ನಗರಾಭಿವೃದ್ಧಿ ಇಲಾಖೆಗೆ ವರ್ಗಾವಣೆಯಾಗಿದೆ.

ಬೆಂಗಳೂರು ಜಿಲ್ಲಾ ಮತ್ತು ಗ್ರಾಮಾಂತರ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಒಕ್ಕೂಟದ ಲೆಕ್ಕ ಪರಿಶೋಧನೆ

194 - ಶ್ರೀ ಸಿ. ಎಂ. ಲಿಂಗಪ್ಪ (ರಾಮನಗರ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಜಿಲ್ಲಾ ಮತ್ತು ಗ್ರಾಮಾಂತರ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದಲ್ಲಿ ಎಷ್ಟು ವರ್ಷಗಳಿಂದ ಡೈರಿಯ ಲೆಕ್ಕ ಪರಿಶೋಧನೆ ನಡೆದಿರುವುದಿಲ್ಲ?

ಆ) ಅದಕ್ಕೆ ಕಾರಣಗಳೇನು?

ಇ) ಎಷ್ಟು ವರ್ಷದಿಂದ ಶೇರುದಾರರಿಗೆ ಡಿವಿಡೆಂಟ್ ನೀಡಿರುವುದಿಲ್ಲ?

ಈ) ಅದಕ್ಕೆ ಕಾರಣಗಳೇನು?

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) 1993-94ನೇ ಸಾಲಿನವರಿಗೆ ಲೆಕ್ಕ ಪರಿಶೋಧನೆಯು ಮುಗಿದಿದ್ದು, 1994-95ನೇ ಸಾಲಿನ ಲೆಕ್ಕ ಪರಿಶೋಧನೆಯು ಪ್ರಗತಿಯಲ್ಲಿದೆ.

ಆ) ಒಕ್ಕೂಟದ ಲೆಕ್ಕ ಪರಿಶೋಧನೆಯು ನಿಯಮಾವಳಿ ಪ್ರಕಾರ ಸಹಕಾರಿ ಇಲಾಖೆ ಲೆಕ್ಕ ಪರಿಶೋಧಕರಿಂದ ಆಗಬೇಕಾಗಿರುತ್ತದೆ. ಒಕ್ಕೂಟದ ಲೆಕ್ಕ ಪತ್ರಗಳು ಪರಿಶೋಧನೆಗಾಗಿ ಸಿದ್ದವಿದ್ದು ಇಲಾಖಾ ಲೆಕ್ಕಪರಿಶೋಧಕರಿಗಾಗಿ ಕಾಯಲಾಗುತ್ತಿದೆ.

ಇ) ಬಮುಲ್ ಲಾಭಗಳಿಸಿದ ವರ್ಷವಾದ 1988-89ನೇ ಸಾಲಿಗೆ ಸಂಬಂಧಿಸಿದಂತೆ ಷೇರುದಾರರಿಗೆ ಡಿವಿಡೆಂಡ್ ನೀಡಲಾಗಿದೆ.1992-93 ಹಾಗೂ 1993-94ನೇ ಸಾಲಿಗೆ ಸಂಬಂಧಿಸಿದಂತೆ ಸರ್ವ ಸದಸ್ಯರ ಮಹಾ ಸಭೆ ಒಪ್ಪಿಗೆ ನಂತರ ಡಿವಿಡೆಂಟ್ ನೀಡಲಾಗುವುದು.

ಈ) 30-6-1993ರ ನಂತರ ಒಕ್ಕೂಟದ ಸರ್ವಸದಸ್ಯರ ಸಭೆ ಜರುಗದೇ ಇರುವ ಕಾರಣ

ಡಿವಿಡೆಂಟ್ ಘೋಷಣೆಯಾಗಿರುವುದಿಲ್ಲ. ಸರ್ವ ಸದಸ್ಯರ ಸಭೆಯು ಘೋಷಣೆಯಾದರೆ ಲಾಭ ಗಳಿಸಿದ ವರ್ಷಗಳಿಗೆ ಡಿವಿಡೆಂಟ್ ನೀಡಲಾಗುವುದು.

ಶ್ರೀ ಸಿ.ಎಂ. ಲಿಂಗಪ್ಪ : ನನ್ನದು ನೇರವಾದ ಪ್ರಶ್ನೆ, ಮಾನ್ಯ ಸಚಿವರು ಸ್ವಲ್ಪ ಸುತ್ತಿ ಬಳಸಿ ಉತ್ತರ ಕೊಡುತ್ತಾರೆ. ಬೆಂಗಳೂರು ಜಿಲ್ಲಾ ಮತ್ತು ಗ್ರಾಮಾಂತರ ಜಿಲ್ಲಾ ಹಾಲು ಉತ್ಪಾದಕರ ಸಂಘ ಒಕ್ಕೂಟದಲ್ಲಿ ಎಷ್ಟು ವರ್ಷಗಳಿಂದ ಲೆಕ್ಕಪರಿಶೋಧನೆ ನಡೆದಿಲ್ಲವೆಂದರೆ ಇಷ್ಟು ವರ್ಷಗಳಿಂದ ಲೆಕ್ಕಪರಿಶೋಧನೆ ನಡೆಸುವುದಕ್ಕೆ ಆಗಿಲ್ಲವೆಂದು ಹೇಳಬಹುದು. ಅದಕ್ಕೆ ಅವರು ಹೇಳುತ್ತಾರೆ, 1994-95ನೇ ಸಾಲಿನ ಲೆಕ್ಕಪರಿಶೋಧನೆ ಪ್ರಗತಿಯಲ್ಲಿದೆ ಎಂದು. ಕಾರಣ ಕೇಳಿದಾಗ ನಮಗೆ ಲೆಕ್ಕ ಪರಿಶೋಧನಾ ಇಲಾಖೆಯಿಂದ ಅಡಿಟರ್ ಕಳುಹಿಸಿಲ್ಲ, ಅದಕ್ಕೋಸ್ಕರ ಆಗಿಲ್ಲವೆಂದು ಹೇಳುತ್ತಾರೆ. ಬೆಂಗಳೂರು ಜಿಲ್ಲಾ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟ ಕೋಟ್ಯಾಂತರ ರೂಪಾಯಿ ವಹಿವಾಟು ನಡೆಸುತ್ತಿರತಕ್ಕದ್ದು. ಅದು ಸಾವಿರಾರು ಹಾಲು ಉತ್ಪಾದಕರ ಸಹಕಾರ ಸಂಘಗಳ ಮೇಲೆ ನಿಯಂತ್ರಣ ಹೊಂದಿರತಕ್ಕದ್ದು. ಲೆಕ್ಕ ಪರಿಶೋಧನೆ ನಿಧಾನವಾದಷ್ಟು ಅದರ ಬಗ್ಗೆ ಸಾರ್ವಜನಿಕರಲ್ಲಿ ಒಂದು ರೀತಿ ಅನುಮಾನ ಉದ್ಭವವಾಗುವುದಕ್ಕೆ ಕಾರಣವಾಗುತ್ತದೆ. ಮಾನ್ಯ ಸಚಿವರು ತುರ್ತಾಗಿ ಲೆಕ್ಕ ಪರಿಶೋಧನೆಗೆ ಏನು ಕ್ರಮಕೈಗೊಳ್ಳುತ್ತೀರಿ?

ಶ್ರೀ ಬಿ.ಬಿ. ನಿಂಗಯ್ಯ : ನಾನು ಸುತ್ತಿ ಬಳಸಿ ಹೇಳತಕ್ಕ ಪ್ರಯತ್ನ ಮಾಡಿಲ್ಲ. ನಾನು ಸ್ಪಷ್ಟವಾದ ಉತ್ತರ ಕೊಟ್ಟಿದ್ದೇನೆ. 1993-94ರವರೆಗೆ ಈಗಾಗಲೇ ಅಡಿಟ್ ಆಗಿದೆ. ಅದರ ಬಗ್ಗೆ ಬೇಕಾದರೆ ಮಾಹಿತಿ ಒದಗಿಸಿಕೊಡಬಹುದು. 1994-95ನೇ ಸಾಲಿನ ಲೆಕ್ಕಪರಿಶೋಧನೆ ಈಗಾಗಲೇ ಆಗಿದೆ. ಸರ್ಕಾರದಿಂದ ಅಂದರೆ ಸಹಕಾರ ಇಲಾಖೆಯಿಂದ ವರದಿ ಬಂದಿಲ್ಲ. 1995-96ರ ವಿಚಾರದಲ್ಲಿ ಕೂಡ ಹೇಳಿದ್ದೇನೆ. ಆ ಸಾಲಿನ ಅಡಿಟ್ ಮಾಡಲು ನಮಗೆ ಮೊನ್ನೆ ಫೆಬ್ರವರಿಯವರೆಗೆ ಅಡಿಟರ್ ಬಂದಿರಲಿಲ್ಲ. ಈಗ ಬಂದಿದ್ದಾರೆ. ಲೆಕ್ಕಪರಿಶೋಧನೆಗೆ ಏನೆಲ್ಲಾ ಕಾಗದಪತ್ರಗಳು ಬೇಕಾಗಿರೆ, ಅವೆಲ್ಲಾ ಸಿದ್ಧ ಇವೆ. ಲೆಕ್ಕಪರಿಶೋಧನೆ ಕಾರ್ಯವನ್ನು ಶುರು ಮಾಡುವುದಕ್ಕೆ ಆದೇಶ ಕೊಡುತ್ತೇನೆ.

ಶ್ರೀ ಸಿ. ಎಂ. ಲಿಂಗಪ್ಪ : ಸನ್ಮಾನ್ಯ ಉಪಾಧ್ಯಕ್ಷರೇ, ಇನ್ನು ಡಿವಿಡೆಂಡ್ ಕೊಡತಕ್ಕಂಥ ವಿಚಾರದ ಬಗ್ಗೆ ಅವರು ಉತ್ತರದಲ್ಲಿ ಹೇಳಿದ್ದಾರೆ. 1988-89ರ ಸಾಲಿನವರೆಗೆ ಸಭೆಯ ಶೇರುದಾರರಿಗೆ ಡಿವಿಡೆಂಡ್ ಕೊಟ್ಟಿದ್ದೇವೆಂದು ಹೇಳಿದ್ದಾರೆ. 1988-89ನೇ ಸಾಲು ಮುಗಿದ ಮೇಲೆ ಸುಮಾರು 8 ವರ್ಷಗಳ ಕಾಲ, ತಮ್ಮ ಉತ್ತರದ ಪ್ರಕಾರ ಡಿವಿಡೆಂಡ್ ಕೊಡಲಿಕ್ಕೆ ಆಗಲಿಲ್ಲ. 1992-93ನೇ ಸಾಲಿನಲ್ಲಿ ಸರ್ವಸದಸ್ಯರ ಸಭೆಯನ್ನು ನಡೆಸಲಿಲ್ಲ ಎನ್ನತಕ್ಕಂಥದ್ದು ಒಂದು ವಿಚಾರವನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. ಈ ಒಂದು ಒಕ್ಕೂಟವು ಸರ್ಕಾರದ ನೇರವಾದ ನಿಯಂತ್ರಣಕ್ಕೆ ಒಳಪಟ್ಟಿರತಕ್ಕಂಥದ್ದು, ಪ್ರತಿವರ್ಷ ಈ ಜಿಲ್ಲಾಮಟ್ಟದ ಒಕ್ಕೂಟದಲ್ಲಿ ಸರ್ವಸದಸ್ಯರ ಸಭೆಯನ್ನು ನಡೆಸುವುದಕ್ಕೆ ಕ್ರಮ ಕೈಗೊಳ್ಳದೆ ಹೋದರೇ ಬಹುಶಃ ಅದು ಯಾವುದೇ ಒಂದು ಗ್ರಾಮದ ವ್ಯವಸಾಯ ಕ್ಷೇತ್ರದ ಸಹಕಾರಿ ಸಂಘದ ಹಾಗೆ ಒಂದು ಉತ್ತಮವಾದ ಸಹಕಾರಿ ಸಂಘವಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಇಲ್ಲಿ ಪ್ರತಿ ವರ್ಷ ಸರ್ವ ಸದಸ್ಯರ ಸಭೆ ನಡೆಯಬೇಕು. ಡಿವಿಡೆಂಡ್ ಡಿಕ್ಲೇರ್

ಆಗಬೇಕು, ಇದರಲ್ಲಿ ಒಂದು ಇಕ್ಕಟ್ಟು ಕಂಡು ಬರುತ್ತಿದೆ. ಅಲ್ಲಿ ಲೆಕ್ಕ ಪರಿಶೋಧನೆಯಾಗದೆ, ಡಿವಿಡೆಂಡ್ ಡಿಕ್ಲೇರ್ ಮಾಡುವುದಕ್ಕೆ ಆಗುವುದಿಲ್ಲ. ಲೆಕ್ಕ ಪರಿಶೋಧನೆಯಾದರೂ ಸರ್ವ ಸದಸ್ಯರ ಸಭೆ ನಡೆಯದೇ ಇದ್ದರೆ, ಡಿವಿಡೆಂಡ್ ಡಿಕ್ಲೇರ್ ಮಾಡುವುದಕ್ಕೆ ಆಗುವುದಿಲ್ಲ. ಹೀಗೆ ಆಗಿ ಏನೋ ಸ್ವಲ್ಪ ಅಸ್ತವ್ಯಸ್ತತೆ ಅಲ್ಲಿ ಕಾಣುತ್ತಾ ಇದೆ. ದಯವಿಟ್ಟು ಇದನ್ನು ತುರ್ತಾಗಿ ಸರಿಪಡಿಸಲು ಏನು ಕ್ರಮ ಅವರು ಕೈಗೊಳ್ಳುತ್ತಾರೆಂದು ತಮ್ಮ ಮೂಲಕ ನಾನು ಕೇಳುತ್ತೇನೆ.

ಶ್ರೀ ಬಿ.ಬಿ. ನಿಂಗಯ್ಯ : ಸನ್ಮಾನ್ಯ ಉಪಾಧ್ಯಕ್ಷರೇ, ಅವರು ಹೇಳಿರುವ ಬಗ್ಗೆ 1992-93, 1993-94ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಮಹಾಸಭೆ ಏನು ನಡೆಯಬೇಕಾಗಿತ್ತೋ ಅದನ್ನು ಸರ್ಕಾರ ಮುಂದಕ್ಕೆ ಹಾಕಿತು. ನಮ್ಮ ಇಲಾಖೆಗೆ ಅದನ್ನು ನಡೆಸಲು ಬರುವುದಿಲ್ಲ. ಸಹಕಾರಿ ಇಲಾಖೆ ಈ ಮಹಾಸಭೆಯನ್ನು ನಡೆಸಲು ತೀರ್ಮಾನ ತೆಗೆದುಕೊಂಡ ತಕ್ಷಣ ಒಕ್ಕೂಟದ ಮಹಾಸಭೆಯಲ್ಲಿ ಒಪ್ಪಿಗೆ ಪಡೆದು ತಕ್ಷಣ ಏನು ಲಾಭ ಬಂದಿರುತ್ತದೋ ಅದರಲ್ಲಿ ಶೇರುದಾರರಿಗೆ ಡಿವಿಡೆಂಡ್ ಕೊಡುವುದಕ್ಕೆ ಬದ್ದರಿದ್ದೇವೆ. ಈ ಬಗ್ಗೆ ನಾನೂ ಕೂಡ ಸಂಬಂಧಪಟ್ಟವರೊಡನೆ ಮಾತನಾಡಿ ತಕ್ಷಣ ಶೇರುದಾರರಿಗೆ ಡಿವಿಡೆಂಡ್ ಕೊಡಲು ಕ್ರಮ ಕೈಗೊಳ್ಳುತ್ತೇನೆ. ಅದೂ ಅಲ್ಲದೆ ಅವರು ಹೇಳಿದ ಪ್ರಕಾರ ಉತ್ತರವನ್ನು ನಾನು ಸ್ಪಷ್ಟವಾಗಿ ಹೇಳಿದ್ದೇನೆ. 1994-95ನೇ ಸಾಲಿಗೆ ಆಡಿಟ್ ಆಗಿದೆ ಆದರೆ ವರದಿ ಬಂದಿಲ್ಲ. 1995-96ನೇದ್ದು ಆಡಿಟ್ ಆಗಬೇಕಾಗಿದೆ. ಈ ಮೂರು ವರ್ಷದಲ್ಲಿ ಸರ್ಕಾರದ ಅವಧಿಯಲ್ಲಿ ಅದು ಲಾಭದಲ್ಲಿ ನಡೆದಿದೆ ಎಂದು ನಾನು ಹೆಮ್ಮೆಯಿಂದ ಹೇಳುತ್ತೇನೆ. ಏಕೆ ಇದು ತಡವಾಗಿದೆ ಎನ್ನುವುದು ಅವರಿಗೆ ಗೊತ್ತಿದೆ.1992-93 ಹಿಂದೆ ಅವರು ಈ ಮನೆಯ ಸದಸ್ಯರಾಗಿದ್ದರು. ಈ ಬಗ್ಗೆ ನಾನು ಸಹಕಾರಿ ಮಂತ್ರಿಗಳ ಜೊತೆಗೆ ಮಾತನಾಡುತ್ತೇನೆ. ಅವರು ಮಹಾಸಭೆಗೆ ಒಪ್ಪಿಗೆ ಕೊಟ್ಟ ತಕ್ಷಣ ರೈತರಿಗೆ ಏನು ಡಿವಿಡೆಂಡ್ ಕೊಡಬೇಕೋ ಅದನ್ನು ಕೊಡಲು ಸರ್ಕಾರ ಬದ್ಧವಾಗಿದೆ. ಅದನ್ನು ಮಾಡುತ್ತದೆ.

ಅರಕಲಗೂಡು ಲೋಕೋಪಯೋಗಿ ಉಪವಿಭಾಗ ಮುಂದುವರಿಕೆ.

195 - ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ/

1) *ಅರಕಲಗೂಡು ಲೋಕೋಪಯೋಗಿ ಉಪ ವಿಭಾಗವನ್ನು ಮುಂದುವರಿಸುವ ಬಗ್ಗೆ ಸರ್ಕಾರದ ಅಭಿಪ್ರಾಯವೇನು ?*

2) *ಮುಂದುವರಿಸಲು ಇರುವ ತೊಂದರೆಗಳೇನು ?*

3) *ಮುಂದುವರಿಸುವ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು ?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

1) ಲೋಕೋಪಯೋಗಿ ಉಪ ವಿಭಾಗ, ಅರಕಲಗೂಡು ಇಲ್ಲಿನ ಸಣ್ಣ ನೀರಾವರಿ ಕಾರ್ಯ ಭಾರವನ್ನು ಗಮನಿಸಿ ಹೆಚ್ಚಿನ ಆದ್ಯತೆಯನ್ನು ನೀಡಬೇಕಾಗಿರುವುದರಿಂದ ಈ ಬಗ್ಗೆ ಕೂಲಂಕು